ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN (E): 2582-2284
Vol-1 Issue 1, July-August 2019, 94-99
©IIMRD, Mysuru
IIMRD JOURNALS
www.iimrd.com

# ಸ್ವಾಮಿ ವಿವೇಕಾನಂದ ದೃಷ್ಟಿಯಲ್ಲಿ ಧರ್ಮ ಮತ್ತು ವಿಚಾರ

ಡಾ.ಪಿ.ಅರುಳಪ್ಪ[1]

**ಪೀಠಿಕೆ:**

ವಿವೇಕಾನಂದರ ಪ್ರಕಾರ ವೇದಗಳಿಂದ ಹಿಡಿದು ತತ್ತ್ವಶಾಸ್ತ್ರದವರೆಗೆ ಎಲ್ಲ ಜ್ಞಾನವೂ ಗೌಣವೇ. ಯಾವ ಜ್ಞಾನವು ಬ್ರಹ್ಮಸಾಕ್ಷಾತ್ಕಾರಕ್ಕೆ ಸಾಧನವಾಗಿದೆಯೋ ಅದೇ ನಿಜವಾದ ಜ್ಞಾನ. ವಿಜ್ಞಾನವು ನಮ್ಮ ಬದುಕಿನ ಕೇವಲ ಒಂದು ಭಾಗಕ್ಕೆ ಮಾತ್ರ ಸೀಮಿತವಾಗಿದೆ. ಆದರೆ ಧರ್ಮವು ನಮಗೆ ನೀಡುವ ಜ್ಞಾನವು ಅನಂತವೂ ಮತ್ತು ಶಾಶ್ವತವೂ ಆಗಿದೆ. ದುರ್ದೈವವೋ ಏನೋ ಧರ್ಮವು ಅನೇಕ ವೇಳೆ ವಿಜ್ಞಾನದ ತಿರಸ್ಕಾರಕ್ಕೆ ಒಳಗಾಗಿದೆ. ಇದಕ್ಕೊಂದು ಕಾರಣವುಂಟು. ಅನೇಕ ವೇಳೆ ಧರ್ಮವು ವೈಜ್ಞಾನಿಕ ಸಮರ್ಥನೆಗೆ ಒಳಪಡಲು ನಿರಾಕರಿಸುತ್ತದೆ. ತತ್‌ಪರಿಣಾಮವಾಗಿ ಜಗತ್ತಿನಲ್ಲಿ ನಾವು ಇಂದು ಧರ್ಮ ಮತ್ತು ವಿಜ್ಞಾನಗಳ ನಡುವೆ ಸೆಣಸಾಟವನ್ನು ಕಾಣುತ್ತಿದ್ದೇವೆ. ಧರ್ಮಕ್ಕೆ ಆಧಾರ ಅದರದೇ ಆದ ಗ್ರಂಥಗಳು. ಧಾರ್ಮಿಕರು ಈ ಧಾರ್ಮಿಕ ಗ್ರಂಥಗಳ ಅಧಿಕಾರಯುಕ್ತತೆಯನ್ನು, ಅವುಗಳ ಹೇಳಿಕೆಗಳ ವೈಚಾರಿಕತೆಯನ್ನು ಪ್ರಶ್ನಿಸಿಕೊಳ್ಳಲು ನಿರಾಕರಿಸುತ್ತಾರೆ. ತರ್ಕಶಾಸ್ತ್ರದಲ್ಲಿ ಇದನ್ನು ಈ ದೋಷವನ್ನು Argumentum Ad Vericundium ಎಂದು ಕರೆಯುತ್ತಾರೆ.[1] ಅಲ್ಲದೇ ಧಾರ್ಮಿಕ ಗ್ರಂಥಗಳ ಹೇಳಿಕೆಗಳಲ್ಲಿ ಅನೇಕ ವೇಳೆ **ಚಕ್ರಕ** ದೋಷ ಇಲ್ಲವೇ **ಅನ್ಯೋನ್ಯಾಶ್ರಯ** ದೋಷವು ಎದ್ದುಕಾಣುತ್ತದೆ. ಪಾಶ್ಚಾತ್ಯ ತರ್ಕಶಾಸ್ತ್ರದಲ್ಲಿ ಈ ದೋಷವನ್ನು Petitio principii ಎಂದು ಕರೆಯುತ್ತಾರೆ.[2]

ಇಲ್ಲಿ ನಾವು ಸಮರ್ಥಿಸಬೇಕಾದ ವಿಷಯವನ್ನೇ ಪೂರ್ವಾಭಾವಿಯಾಗಿ ಸತ್ಯವೆಂದು ಅಂಗೀಕರಿಸುತ್ತೇವೆ. ಉದಾಹರಣೆಗೆ "ಶ್ರುತಿಯ ಹೇಳಿಕೆಯು ನಿಜ, ಏಕೆಂದರೆ ಅದು ಈಶ್ವರನಿಂದ ಹೊರಹೊಮ್ಮಿದೆ. ಈಶ್ವರನು ಸತ್ಯ, ಏಕೆಂದರೆ ಶ್ರುತಿಯೇ ಆತನು ಸತ್ಯವೆಂದು ಸಾರುತ್ತದೆ." ಹೀಗೆ ಶ್ರುತಿಯ ಪ್ರಾಮಾಣ್ಯವನ್ನು ಸ್ಥಾಪಿಸಲು ಈಶ್ವರನಿಗೆ ಮೊರೆಹೋಗುವುದರಿಂದಲೂ ಮತ್ತು ಈಶ್ವರನ ಸತ್ಯತೆಯನ್ನು ಶ್ರುತಿಗೆ ಮೊರೆಹೋಗುವುದರಿಂದಲೂ ಸ್ಥಾಪಿಸಲು ಯತ್ನಿಸುತ್ತೇವೆ. ಧಾರ್ಮಿಕರು ಈ ಯಾವ ವೈಚಾರಿಕ ಪ್ರಶ್ನೆಯನ್ನೂ ಎದುರಿಸಲು ಸಿದ್ಧರಿಲ್ಲ. ವಿಜ್ಞಾನಿಗಳು ತಮ್ಮ ಹರಿತವಾದ ಬುದ್ಧಿಶಕ್ತಿಯಿಂದ ಧರ್ಮಗ್ರಂಥದ ಹೇಳಿಕೆಗಳನ್ನು ಪ್ರಶ್ನಿಸುತ್ತಾರೆ. ಈ ರೀತಿ ಧರ್ಮ ಮತ್ತು ವಿಜ್ಞಾನಗಳ ನಡುವಣ ಹೋರಾಟವು 19ನೇ ಶತಮಾನದ ಆದಿಯಿಂದಲೂ ಇದ್ದೇ ಇದೆ. ಧರ್ಮವು ಪದೇ ಪದೇ ಸೋಲಿಗೆ ಒಳಗಾಗಿದೆ. ಈ ಹೋರಾಟವು ಯಾವ ಮಟ್ಟಕ್ಕೆ ಹೋಗಿರುವುದೆಂದರೆ ಧರ್ಮವು ಪೂರ್ಣವಾಗಿ ಅವನತಿಯ ಹಂತಕ್ಕೆ ಬಂದುಬಿಟ್ಟಿದೆ.

---

[1] *ಪಿಡಿಎಫ್ ಸಂಶೋಧಕ, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–570 006.*

ಆಧುನಿಕ ಯುಗದಲ್ಲಿ ಹಿಂದಿನ ಕಾಲಕ್ಕಿಂತಲೂ ಈಗ ಭೌತವಿಜ್ಞಾನಗಳು ಸಾಕಷ್ಟು ಮುಂದುವರೆದಿವೆ. ಆದರೆ ಧರ್ಮಗಳಲ್ಲಿ ಆ ರೀತಿಯ ಯಾವುದೇ ಪ್ರಗತಿಯನ್ನು ನಾವು ಕಾಣುತ್ತಿಲ್ಲ. ಅರ್ಚಕರ ಒಂದು ವ್ಯವಸ್ಥಿತ ಒಕ್ಕೂಟವೋ ಅಥವಾ ಯಾವುದೋ ಒಬ್ಬ ನಿರ್ದಿಷ್ಟ ವ್ಯಕ್ತಿಯೋ ಅಥವಾ ಯಾವುದೋ ಒಂದು ಧರ್ಮಗ್ರಂಥವೋ ಒತ್ತಾಯಪಡಿಸುವ ಕೆಲವು ಸಂಗತಿಗಳನ್ನು ಮಾತ್ರ ನಂಬಬೇಕೆನ್ನುವುದು ಆಧುನಿಕರಿಗೆ ಜೀರ್ಣಿಸಿಕೊಳ್ಳಲಾಗದ ಅಂಶ. ಇದು ವಿಚಾರದ ಯುಗ. ನಾವು ಮಾಡುವ ಯಾವುದೇ ಕೆಲಸಕ್ಕೆ ನಾವು **ಏಕೆ** ಎಂಬ ಪ್ರಶ್ನೆಯನ್ನು ಕೇಳಿಯೇ ತೀರುತ್ತೇವೆ. ಧರ್ಮವೇನೂ ಇದಕ್ಕೆ ಹೊರತಲ್ಲ.

ಪ್ರಸ್ತುತ ನಮ್ಮನ್ನು ಕಾಡುವ ಸಮಸ್ಯೆಯೆಂದರೆ ಧರ್ಮ ಮತ್ತು ವಿಜ್ಞಾನಗಳ ಈ ಹೋರಾಟವನ್ನು ಪರಿಹರಿಸುವ ಮಾರ್ಗವೇನಾದರೂ ಇದೆಯೇ ಎಂಬುದು. ಇನ್ನೂ ಸ್ಥೂಲವಾಗಿ ಹೇಳಬೇಕೆಂದರೆ, ಇತರ ವಿಜ್ಞಾನಗಳೆಲ್ಲವೂ ತಮ್ಮ ಸಮರ್ಥನೆಗೆ ಬಳಸುವ ವಿಚಾರವೆಂಬ ಸಾಧನದ ಮೂಲಕ ಧರ್ಮವು ತನ್ನನ್ನು ತಾನು ಸಮರ್ಥಿಸಿಕೊಳ್ಳಬಲ್ಲದೇ, ವಿಜ್ಞಾನಕ್ಕೆ ಅನ್ವಯಿಸಬಹುದಾದ ವಿಧಾನಗಳನ್ನೇ ಧರ್ಮಕ್ಕೂ ಅನ್ವಯಿಸಲು ಸಾಧ್ಯವೇ, ಎಂಬ ಪ್ರಶ್ನೆಯು ನಮ್ಮನ್ನು ಕಾಡುತ್ತದೆ. ಈ ಪ್ರಶ್ನೆಗೆ ಸ್ವಾಮಿ ವಿವೇಕಾನಂದರ ಉತ್ತರ ಸಕಾರಾತ್ಮಕವಾದುದು. ಧರ್ಮಕ್ಕೂ ವೈಜ್ಞಾನಿಕ ಬುನಾದಿ ಇದೆ. ವಿವೇಕಾನಂದರಿಗೆ ವೈಚಾರಿಕ ಬುನಾದಿ ಇಲ್ಲದ ಧರ್ಮವು ಬೇಕಿಲ್ಲ. ಜಗತ್ತಿನಲ್ಲಿ ಸಂಭವಿಸಬಹುದಾದ ಅತ್ಯಂತ ಉತ್ತಮವಾದ ಘಟನೆಯೆಂದರೆ ವಿವೇಕಾನಂದರ ಪ್ರಕಾರ ಅಂತಹ ಅವೈಚಾರಿಕ ಧರ್ಮದ ನಾಶ. ಇದರಿಂದ ಧರ್ಮದಲ್ಲಿ ಬೇರೂರಿರುವ ಎಲ್ಲ ಕೊಳಕುಗಳೂ ಹೋಗಿ ಪರಿಶುದ್ಧವಾದ ಧರ್ಮವು ಉಳಿಯುತ್ತದೆ. ಇತರ ವಿಜ್ಞಾನಗಳ ತೀರ್ಮಾನಗಳು ವೈಜ್ಞಾನಿಕವಾಗಿ ಹೇಗೋ ಹಾಗೆಯೇ ಧರ್ಮದ ಸಾರಭೂತ ಅಂಶಗಳು ಮಾತ್ರ ಉಳಿದುಕೊಳ್ಳುತ್ತವೆ.

ಧರ್ಮವನ್ನು ವೈಚಾರಿಕ ಪರೀಕ್ಷೆಗೆ ಒಳಪಡಿಸಲು ನಿರಾಕರಿಸುವವರು ಅದು ಹೇಗೋ ಆಂತರಿಕ ವಿರೋಧಾಭಾಸಕ್ಕೆ ಒಳಗಾಗುತ್ತಾರೆ. ಧರ್ಮದ ಹೇಳಿಕೆಗಳನ್ನು ಯಥಾರ್ಥವೆಂದು ಹೇಗೆ ನಿರ್ಧರಿಸುವುದು? ನಿಜವಾಗಿಯೂ ಪುಸ್ತಕಗಳಿಂದಲ್ಲ. ಏಕೆಂದರೆ, ಪುಸ್ತಕಗಳನ್ನು ರೂಪಿಸುವವನು ಮನುಷ್ಯನೇ ಹೊರತು ಮನುಷ್ಯನು ಪುಸ್ತಕಗಳಿಂದ ರೂಪಿಸಲ್ಪಟ್ಟವನಲ್ಲ. ಅಲ್ಲದೇ ಎರಡು ಧಾರ್ಮಿಕ ಗ್ರಂಥಗಳ ನಡುವಣ ವೈರುಧ್ಯವಿರುವುದನ್ನು ನಾವು ಕಾಣಬಹುದು. ತಮ್ಮಲ್ಲೇ ವಿರೋಧಾಭಾಸವನ್ನು ಹೊಂದಿರುವ ಈ ಗ್ರಂಥಗಳನ್ನು ಯಥಾರ್ಥವೆಂದು ಸ್ವೀಕರಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಪುಸ್ತಕಗಳಿಗಿಂತಲೂ ಹೆಚ್ಚಾಗಿ ಜಗತ್ತಿನ ಎಲ್ಲ ಧರ್ಮಗಳ ಸ್ಫೂರ್ತಿಶಕ್ತಿಗಳನ್ನು ನಿರ್ಧರಿಸಬಹುದಾದ ವಿಶಾಲವಾದ ತತ್ತ್ವವನ್ನು ನಾವು ಅಂಗೀಕರಿಸಬೇಕಾಗುತ್ತದೆ. ಈ ತತ್ತ್ವವನ್ನೇ ವಿವೇಕಾನಂದರು **ವಿಚಾರ** (Reason) ಎಂದು ಕರೆಯುವುದು.

ವಿಚಾರವೊಂದೇ ಎಲ್ಲಾ ಧಾರ್ಮಿಕ ಹೇಳಿಕೆಗಳ ಸ್ಫೂರ್ತಿಶಕ್ತಿಗಳನ್ನು ನಿರ್ಧರಿಸಬಲ್ಲದು. ವಿಚಾರಕ್ಕೆ ಇದು ಸಾಧ್ಯವಿಲ್ಲವಾದರೆ, ಯಾವುದಕ್ಕೂ ಸಾಧ್ಯವಿಲ್ಲವಾಗಿ ಯುಗಯುಗಾಂತರಗಳಿಂದ ಸಂಭವಿಸುತ್ತಾ ಬಂದಿರುವ ಧಾರ್ಮಿಕ ಗ್ರಂಥಗಳ ನಡುವಣ ಹೋರಾಟವು ಅನಿವಾರ್ಯವಾಗಿ ಮುಂದುವರಿಯುತ್ತದೆ. ಎಲ್ಲ ಧರ್ಮಗಳೂ ಸುಳ್ಳು ಹೇಳಿಕೆಗಳಾಗಿ ಪರಿಣಮಿಸುತ್ತವೆ. ವಿವೇಕಾನಂದರ ಪ್ರಕಾರ ಧರ್ಮದ ಪ್ರಾಮಾಣ್ಯವು ಮನುಷ್ಯನ ಆಂತರಿಕ ರಚನೆಯ ಸತ್ಯತೆಯ ಮೇಲೆ ನಿಂತಿದೆಯೇ ಹೊರತು ಪುಸ್ತಕ ಮೇಲಲ್ಲ. ಗ್ರಂಥಗಳು ಮನುಷ್ಯನು ಆಂತರಿಕ ರಚನೆಯ ಪರಿಣಾಮ. ಮನುಷ್ಯನು ಈ ರಚನೆಯ ಪರಿಣಾಮವಾಗಿ ಗ್ರಂಥಗಳನ್ನು

ರಚಿಸಿದನು. ಮನುಷ್ಯನನ್ನು ರೂಪಿಸಿದ ಗ್ರಂಥಗಳನ್ನು ಜಗತ್ತಿನಲ್ಲಿ ನಾವಿನ್ನೂ ಕಾಣಬೇಕಿದೆ ಎಂದು ವಿವೇಕಾನಂದರು ಸಾರುತ್ತಾರೆ. ವಿಚಾರವು ಮನುಷ್ಯನ ಆಂತರಿಕ ರಚನೆ. ಆದ್ದರಿಂದ ಧಾರ್ಮಿಕ ತೀರ್ಮಾನಗಳ ಪ್ರಾಮಾಣ್ಯವನ್ನು ನಿರ್ಧರಿಸಲು ನಾವು ವಿಚಾರಕ್ಕೆ ಮೊರೆಹೋಗಲೇಬೇಕು.

ಈಗ ವಿಚಾರವೆಂದರೇನು ಎಂಬ ಪ್ರಶ್ನೆಯೇಳುತ್ತದೆ. ವಿವೇಕಾನಂದರ ಪ್ರಕಾರ **ಸಾಮಾನ್ಯದ** ಮೂಲಕ **ವಿಶೇಷವನ್ನು** ವಿವರಿಸುವ ಪ್ರಕ್ರಿಯೆಯೇ ವಿಚಾರ. ವಿವೇಕಾನಂದರು ಇಲ್ಲಿ ವಿಚಾರವನ್ನು ನಿಗಮನ ಅನುಮಾನಕ್ಕೆ ಸೀಮಿತಗೊಳಿಸುತ್ತಾರೆಂಬುದು ಗಮನಾರ್ಹ. ವಿಶೇಷವನ್ನು ಸಾಮಾನ್ಯದ ಮೂಲಕ, ಆ ಸಾಮಾನ್ಯವನ್ನು ಇನ್ನೂ ವಿಸ್ತಾರವಾದ ಸಾಮಾನ್ಯದ ಮೂಲಕ ವಿವರಿಸುವ ಪ್ರಕ್ರಿಯೆಯೇ ವಿವೇಕಾನಂದರ ಪ್ರಕಾರ ವಿಚಾರ. ಈ ಪ್ರಕ್ರಿಯೆಯನ್ನು ಮುಂದುವರಿಸುತ್ತಾ ಹೋದಲ್ಲಿ ಇನ್ನಾವ ಸಾಮಾನ್ಯದ ಮೂಲಕವೂ ವಿವರಿಸಲಾಗದ **ಅತಿಸಾಮಾನ್ಯದ** ಹಂತಕ್ಕೆ ನಾವು ಬರುತ್ತೇವೆ. ಉದಾಹರಣೆಗೆ ನಿರ್ದಿಷ್ಟ ಘಟನೆಯನ್ನು ನಾವು ಒಂದು ಆಲೋಚನೆಯ ಮೂಲಕ, ಎಂದರೆ ನಿರ್ದಿಷ್ಟ ನಿಯಮದ ಕಾರ್ಯವೆಂದು ವಿವರಿಸುತ್ತೇವೆ. ಹೀಗೆ, ವಿಚಾರದಲ್ಲಿ ವಿಶೇಷಗಳನ್ನು ಸಾಮಾನ್ಯದ ಮೂಲಕವೂ, ಸಾಮಾನ್ಯಗಳನ್ನು ಇನ್ನೂ ವಿಸ್ತಾರವಾದ ಸಾಮಾನ್ಯಗಳ ಮೂಲಕವೂ ಮತ್ತು ಈ ಸಾಮಾನ್ಯಗಳನ್ನು ಅತ್ಯಂತ ಶ್ರೇಷ್ಠ ಸಾಮಾನ್ಯದ ಮೂಲಕವೂ ವಿವರಿಸಲು ಯತ್ನಿಸುತ್ತೇವೆ. ಈ **ಅತಿಸಾಮಾನ್ಯದ** ಹಂತವನ್ನು ವಿವೇಕಾನಂದರು **ಸತ್** ಎಂದು ಹೆಸರಿಸುತ್ತಾರೆ. ಉದಾಹರಣೆಗೆ ನಮ್ಮಲ್ಲಿ ಪ್ರತಿಯೊಬ್ಬರೂ **ಮನುಷ್ಯತ್ವ** ಎಂಬ ಸಾಮಾನ್ಯ ಕಲ್ಪನೆಯ ಅಂಗವಾಗಿದ್ದೇವೆ. ಹಾಗೆಯೇ ಮನುಷ್ಯ, ಒಂದು ಬೆಕ್ಕು ಮತ್ತು ಒಂದು ನಾಯಿ ಇನ್ನೂ ವಿಸ್ತಾರವಾದ **ಪ್ರಾಣಿ** ಎಂಬ ಸಾಮಾನ್ಯದ ವಿಶೇಷ ಅಂಗಗಳಾಗಿವೆ. ಹಾಗೆಯೇ ಮನುಷ್ಯ, ಬೆಕ್ಕು, ನಾಯಿ ಮತ್ತೂ ವೃಕ್ಷಗಳು ಮತ್ತೂ ವಿಸ್ತಾರವಾದ **ಜೀವ** ಎಂಬ ಸಾಮಾನ್ಯದ ಅಡಿಯಲ್ಲಿ ಬರುತ್ತವೆ. ಪುನಃ ಈ ಎಲ್ಲಾ ಜೀವಿಗಳು ಜಗತ್ತಿನ ಇತರ ನಿರ್ಜೀವ ವಸ್ತುಗಳೊಂದಿಗೆ **ಸತ್** ಎಂಬ **ಅತಿಸಾಮಾನ್ಯ**ದಡಿಯಲ್ಲಿ ಬರುತ್ತವೆ. ಹೀಗೆ, ವಿಶೇಷವನ್ನು ಸಾಮಾನ್ಯದ ಮೂಲಕ ವಿವರಿಸುವ ಪ್ರಕ್ರಿಯೆಯೇ ವಿಚಾರ. ಈ ಪ್ರಕ್ರಿಯೆಯು ಎಲ್ಲ ಮನಸ್ಸುಗಳ ಸ್ವಭಾವ. ವಿವೇಕಾನಂದರ ಪ್ರಕಾರ ಮನಸ್ಸು ತನ್ನ ಕೊಠಡಿಯಲ್ಲಿ ಅಂತಹ ಅಸಂಖ್ಯಾತ ವಿಧವಾದ ಸಾಮಾನ್ಯೀಕರಣಗಳನ್ನು ಶೇಖರಿಸಿಕೊಂಡಿದೆ. ಎಂದರೆ ಅದು ಜಗತ್ತಿನ ಘಟನೆಗಳನ್ನು ಸಾಮಾನ್ಯೀಕರಿಸುವ ವಿಧಾನ ಅಸಂಖ್ಯಾತವಾದುದು. ಅದೊಂದು ಪಾರಿವಾಳದ ಗೂಡು ಇದ್ದಂತೆ. ಈ ಗೂಡಿನಲ್ಲಿ ಅಸಂಖ್ಯಾತ ರಂಧ್ರಗಳಿದ್ದು, ಈ ರಂಧ್ರಗಳಲ್ಲೇ ವಿವಿಧ ಆಲೋಚನೆಗಳು ವ್ಯವಸ್ಥಿತವಾಗಿ ಒಗ್ಗೂಡುವುದು. ಮನಸ್ಸು ಆಲೋಚನೆಗಳನ್ನು ತನ್ನಲ್ಲಿರುವ ಈ ವಿನ್ಯಾಸಗಳಿಗೆ ಅಥವಾ ರಂಧ್ರಗಳಿಗೆ ಹೊಂದಿಸಲು ಯತ್ನಿಸುತ್ತದೆ. ತನ್ನೀ ಪ್ರಯತ್ನದಲ್ಲಿ ಅದು ಸಫಲವಾದರೆ ಅದು ವಸ್ತುವನ್ನು ತಿಳಿದಂತೆ. ಇಲ್ಲದಿದ್ದರೆ ವಸ್ತುವು ಅದಕ್ಕೆ ಅಸಂಬದ್ಧವೆನಿಸುತ್ತದೆ. ಒಟ್ಟಾರೆ, ವಿವೇಕಾನಂದರ ಪ್ರಕಾರ **ಜ್ಞಾನವೆಂಬುದು ವಿಷಯಗಳ ವರ್ಗೀಕರಣವಷ್ಟೇ.**

ಮತ್ತೊಂದು ದೃಷ್ಟಿಯ ಪ್ರಕಾರ ಜ್ಞಾನದ ಮೂಲ ಆಂತರಿಕವೇ ಹೊರತು ಬಾಹ್ಯವಲ್ಲ. ಇಲ್ಲಿ ನಾವು ಘಟನೆಗಳ ಕಾರಣವನ್ನು ಘಟನೆಗಳ ಹೊರಗಿನಿಂದ ಹುಡುಕುವ ಯತ್ನವನ್ನು ಮಾಡುವುದಿಲ್ಲ. ಈ ದೃಷ್ಟಿಯ ಪ್ರಕಾರ ಬಾಹ್ಯಘಟನೆಗಳಿಗೆ ಕಾರಣ ಆಂತರಿಕವೇ ಹೊರತು ಬಾಹ್ಯವಲ್ಲ. ಆದರೂ ನೈಸರ್ಗಿಕ ಘಟನೆಗಳಿಗೆ ಅತಿನೈಸರ್ಗಿಕ ಕಾರಣವನ್ನು ಹುಡುಕುವ ಪ್ರವೃತ್ತಿಯನ್ನು ನಾವು ಕಾಣುತ್ತೇವೆ. ಉದಾಹರಣೆಗೆ ಮೇಲಿನಿಂದ ಬೀಳುವ ಕಲ್ಲಿಗೆ ಒಂದು ಭೂತವೇ ಕಾರಣವೆನ್ನುವ ಪ್ರವೃತ್ತಿ. ಭೂತವೇ ಕಲ್ಲನ್ನು ಮೇಲಿನಿಂದ ಕೆಳಗೆ

ಸೆಳೆಯುತ್ತದೆ ಎಂಬುದು ಕೆಲವರ ವಾದ. ಇಲ್ಲಿ ಘಟನೆಗಳಿಗೆ ಬಾಹ್ಯವಾದ ಕಾರಣವನ್ನು ಹುಡುಕುವ ಪ್ರವೃತ್ತಿ ಇದೆ. ಆದರೆ ಗುರುತ್ವಾಕರ್ಷಣೆಯು ಕಲ್ಲಿನ ಸ್ವಭಾವದೊಳಗೆ ಅಂತರ್ಗತವಾಗಿರುವ ನಿಯಮ. ವಿಜ್ಞಾನವು ಸಂಗತಿಗಳನ್ನು ಅವುಗಳ ಸ್ವರೂಪದೊಳಗಿನಿಂದ ವಿವರಿಸುತ್ತದೆಯೇ ಹೊರತು ಸಂಗತಿಗೆ ಬಾಹ್ಯವಾದ ಮತ್ತು ಪರೀಕ್ಷಿಸಲು ಅಸಾಧ್ಯವಾದ ಯಾವುದೋ ಅಜ್ಞಾತ ಅಂಶದಿಂದಲ್ಲ. ಈ ಪ್ರವೃತ್ತಿಯನ್ನು **ವಿಗಮನ** ಅನುಮಾನವೆಂದು ಕರೆಯುತ್ತಾರೆ. ಜಗತ್ತಿನ ಆಗು–ಹೋಗುಗಳಿಗೆ ಯಾವ ಬಾಹ್ಯವಿವರಣೆಯೂ ಬೇಕಿಲ್ಲ. ವಿಜ್ಞಾನಿಗೆ ನೈಸರ್ಗಿಕ ಘಟನೆಯನ್ನು ವಿವರಿಸಲು ಭೂತ ಪ್ರೇತ ಪಿಶಾಚಿಗಳ ಅವಶ್ಯಕತೆ ಇಲ್ಲ. ಈ ವಿಷಯದಲ್ಲಿ ಧರ್ಮದಲ್ಲಿ ಕೊರತೆಯು ಎದ್ದು ಕಾಣುತ್ತದೆ ಎಂದು ವಿವೇಕಾನಂದರ ವಾದ. ಧಾರ್ಮಿಕ ಸೌಧವು ಕುಸಿದುಬೀಳುತ್ತಿರುವುದಕ್ಕೆ ಈ ಕೊರತೆಯೇ ಮುಖ್ಯ ಕಾರಣ. ಧರ್ಮದಲ್ಲಿ ಒಂದು ಪ್ರಾಚೀನ ನಂಬಿಕೆ ಇದೆ. ಈ ನಂಬಿಕೆಯ ಪ್ರಕಾರ ಜಗತ್ತಿಗಿಂತಲೂ ಸಂಪೂರ್ಣವಾಗಿ ಪ್ರತ್ಯೇಕವಾದ ಒಂದು ಮೂರ್ತದೇವರಿದ್ದು, ಈ ದೇವರೇ ತನ್ನ ಸಂಕಲ್ಪದಿಂದ ಜಗತ್ತನ್ನು ಸೃಷ್ಟಿಸಿರುವುದು. ದೇವರನ್ನು ದಯೆಯ ಸಾಕಾರವೆಂದು ಚಿತ್ರಿಸಲಾಗಿದೆ. ಆದರೆ ದಯಾಮಯನಾದ ದೇವರು ಸೃಷ್ಟಿಸಿದ ಜಗತ್ತಿನಲ್ಲಿ ಅಸಮಾನತೆ ಏಕೆ ಇರಬೇಕೆಂಬುದು ಪ್ರಶ್ನೆ. ಬ್ರಹ್ಮಸೂತ್ರದ ಪರಿಭಾಷೆಯಲ್ಲಿ ಹೇಳಬೇಕೆಂದರೆ, ಜಗತ್ತಿನಲ್ಲಿ ಏಕೆ **ವೈಷಮ್ಯ** ಮತ್ತು **ನೈರ್ಘೃಣ್ಯ** ಇರಬೇಕು? ತಾತ್ವಿಕನು ದೃಶ್ಯಜಗತ್ತನ್ನು ದೃಶ್ಯಾತೀತಕ್ಕೆ ಗುರುತಿಸುವ ಈ ಪ್ರವೃತ್ತಿಯಲ್ಲಿ ಅಸಾಂಗತ್ಯವನ್ನು ಕಾಣುತ್ತಾನೆ. ಜಗತ್ತಿನ ಕಾರಣವೇನು? ಅದರ ಕಾರಣವು ಬಾಹ್ಯವೇ? ಧರ್ಮಗಳು ಈ ಪ್ರಶ್ನೆಗೆ ಧನಾತ್ಮಕ ಉತ್ತರವನ್ನು ನೀಡಿದ್ದಲ್ಲಿ ಆಗ ಅವುಗಳ ಹೇಳಿಕೆಗಳು ಅವೈಚಾರಿಕವಾಗುತ್ತವೆ ಮತ್ತು ಇಡೀ ಧಾರ್ಮಿಕ ಸೌಧವು ಕುಸಿದುಬೀಳುತ್ತದೆ.

ಈ ಸಂಗತಿಗೆ ಸಂಬಂಧಿಸಿದ ಮತ್ತೊಂದು ವಿಷಯವೆಂದರೆ ಆಧುನಿಕ ವಿಕಾಸವಾದ. ಈ ಸಂದರ್ಭದಲ್ಲಿ ಕಾರ್ಯಕಾರಣವಾದವನ್ನು ಕುರಿತ ಭಾರತೀಯ ದೃಷ್ಟಿಕೋನದ ಸ್ಥೂಲಪರಿಚಯವು ಅಗತ್ಯ. ಈ ಜಗತ್ತಿನಲ್ಲಿ ಯಾವುದೂ ಅನಿಶ್ಚಿತವಲ್ಲವೆಂಬುದು ವಿಜ್ಞಾನಿಗಳ ಮತ. ಎಂದರೆ ಅದರಲ್ಲಿ ಸಂಭವಿಸುವ ಪ್ರತಿಯೊಂದು ಘಟನೆಗೂ ಒಂದು ಕಾರಣವಿದೆ ಮತ್ತು ಆ ಘಟನೆಯು ಇನ್ನೊಂದು ಘಟನೆಗೆ ಕಾರಣವಾಗಿದೆಯೆಂದರ್ಥ. ವಿಜ್ಞಾನಿಗಳ ಅನ್ವೇಷಣೆಯೆಲ್ಲವೂ ಕಾರ್ಯಕಾರಣ ನಿಯಮವನ್ನೇ ಆಧರಿಸಿರುವುದರಿಂದ ಈ ನಿಯಮವನ್ನು ವೈಜ್ಞಾನಿಕ ಪದ್ಧತಿಯ "ಆಧಾರತತ್ತ್ವ" (ಕಥಣಣಟಚಣಜ) ಎಂದು ಕರೆಯುವುದುಂಟು.

ಒಟ್ಟಾರೆ ಧರ್ಮವು ವಿಜ್ಞಾನದ **ಸಾಮಾನ್ಯೀಕರಣ** ತತ್ತ್ವವನ್ನು ತೃಪ್ತಿಪಡಿಸಬೇಕಾಗುತ್ತದೆ. ಸಾಮಾನ್ಯೀಕರಣ ತತ್ತ್ವವು ಅಣುವಿನಿಂದ ಹಿಡಿದು ಮಹತ್ತಿನವರೆಗೆ–ವಿಶ್ವದ ಎಲ್ಲ ಘಟನೆಗಳನ್ನೂ ವಿವರಿಸಬಲ್ಲ ತತ್ತ್ವವಾಗಿದೆ. ವೇದಾಂತದ **ಸತ್** ಅಥವಾ **ಬ್ರಹ್ಮವು** ಈ ತತ್ವವನ್ನು ತೃಪ್ತಿಪಡಿಸಬಲ್ಲದೆಂದು ವಿವೇಕಾನಂದರ ಅಭಿಪ್ರಾಯ. ವಿಶ್ವದ ಎಲ್ಲ ಆಗುಹೋಗುಗಳನ್ನೂ ಸಮರ್ಥವಾಗಿ ವಿವರಿಸಬಲ್ಲ ಅತ್ಯಂತ ಸಾಮಾನ್ಯ ಪರಿಕಲ್ಪನೆಯೆಂದರೆ ಬ್ರಹ್ಮ. ಏಕೆಂದರೆ ಅದರ ಸ್ವರೂಪ ಸತ್–ಚಿತ್–ಆನಂದ–ಅನಂತ. ವಾಸ್ತವವಾಗಿ ಬ್ರಹ್ಮಶಬ್ದದ ವ್ಯುತ್ಪತ್ತಿಯೇ **"ಒಡೆದು ಮೂಡು"** ಎಂದು. ಅದು **ಬೃಹ್** ಎಂಬ ಧಾತುವಿನಿಂದ ಬಂದಿದೆ. **ಬೃಹ್** ಎಂದರೆ ವಿಕಸಿಸು ಅಥವಾ ಆಸ್ಫೋಟಿಸು ಎಂದರ್ಥ. ವಿಶ್ವವಾಗಿ ಒಡೆದು ಮೂಡುವ ಸತ್ಯವೇ ಬ್ರಹ್ಮ.[3] ಹೀಗೆ ಸತ್ ಎಂಬುದು ಮಾನವ ಮನಸ್ಸು ತಲುಪಬಹುದಾದ ಅತ್ಯಂತ ವಿಶಾಲವಾದ ಸಾಮಾನ್ಯ ತತ್ತ್ವ. ಅದು ಜಗತ್ತಿನ ಏಕತೆಯನ್ನು ಪ್ರತಿನಿಧಿಸುತ್ತದೆ. ಆಧುನಿಕ ವಿಜ್ಞಾನವು ಏನನ್ನಾದರೂ ಸಮರ್ಥಿಸುತ್ತಿದ್ದಲ್ಲಿ ಅದು ಈ ಏಕತೆಯನ್ನು ಮಾತ್ರ,

ನಾವೆಲ್ಲರೂ ಭೌತಿಕವಾಗಿ, ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಒಂದೇ ಎಂಬುದನ್ನು ಮಾತ್ರ. ಭೌತಿಕವಾಗಿ ನಾವು ಭಿನ್ನರೆಂದು ಹೇಳುವುದು ತಪ್ಪು. ಒಂದು ಪಕ್ಷ ನಾವು ಭೌತವಾದಿಗಳಾಗಿದ್ದಲ್ಲಿ ಇಡೀ ವಿಶ್ವವು ಪ್ರಕೃತಿಯೆಂಬ ಒಂದೇ ಒಂದು ತತ್ತ್ವದ ಆವಿರ್ಭಾವವೆಂದು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಭೌತಿಕ ಸ್ತರದಲ್ಲೂ ನಾವು ಏಕತೆಯನ್ನು ಅಂಗೀಕರಿಸಬೇಕಾಗುತ್ತದೆ. ಈ ವಿಶ್ವದಲ್ಲಿ ಕಾಣಬರುವ ವೈವಿಧ್ಯತೆಯು ಪ್ರಕೃತಿಯೆಂಬ ಏಕತತ್ವದ ಭಿನ್ನ ಭಿನ್ನ ತೋರಿಕೆಗಳಷ್ಟೇ. ಇದು ಮನಸ್ಸಿಗೂ ಅನ್ವಯಿಸುವ ಸಂಗತಿ. ಎಲ್ಲ ಮನಸ್ಸುಗಳೂ ಒಂದೇ. ನಿರ್ದಿಷ್ಟ ಮನಸ್ಸುಗಳು ಒಂದೇ ವಿಶಾಲ ಮನಸ್ಸಿನ ಸಣ್ಣ ಸಣ್ಣ ಆವಿರ್ಭಾವಗಳಷ್ಟೇ. ಈ ಏಕತೆಯನ್ನೇ ಆಧುನಿಕ ವಿಜ್ಞಾನವು ಸಮರ್ಥಿಸಲು ಹೊರಟಿರುವುದು. ವಿವೇಕಾನಂದರ ಪ್ರಕಾರ ಆತ್ಮವೇ ಇಡೀ ವಿಶ್ವದ ಸಾರ. ಈ ಸಂದರ್ಭದಲ್ಲಿ ಅವರು **ಒಂದು ಸಣ್ಣ ಕೂದಲಿನಷ್ಟಾದರೂ ಒಬ್ಬನು ಇತರರಿಂದ ಭಿನ್ನತೆಯ ಭಾವವನ್ನು ಹೊಂದಿದಲ್ಲಿ ಅವನು ದುಃಖಿಯಾಗುತ್ತಾನೆ** ಎಂಬ ಉಪನಿಷತ್ತಿನ ವಾಕ್ಯವನ್ನು ಉಲ್ಲೇಖಿಸುತ್ತಾರೆ.[4] ಹೀಗೆ ವಿವೇಕಾನಂದರ ಪ್ರಕಾರ ವೇದಾಂತವು ಮಾತ್ರ ವೈಜ್ಞಾನಿಕ ಜಗತ್ತಿನ ನಿರೀಕ್ಷೆಗಳನ್ನು ತಣಿಸುವುದು. ಅದೊಂದೇ ನಿಜವಾದ ಧರ್ಮ. ಜಗತ್ತಿನ ವಿವರಣೆಯು ಅದರೊಳಗೇ ಅಡಗಿದೆ ಎಂಬ ತತ್ತ್ವವು ವೇದಾಂತದಿಂದ ಮಾತ್ರ ಪ್ರತಿಪಾದಿತವಾಗಿದೆ. ಏಕೆಂದರೆ, ಬ್ರಹ್ಮದ ಹೊರತಾಗಿ ಮತ್ತಾವ ವಸ್ತುವೂ ಇಲ್ಲ. ಉಪನಿಷತ್ತುಗಳು ಇಡೀ ಜಗತ್ತನ್ನು ಬ್ರಹ್ಮದೊಂದಿಗೆ ಏಕೀಕರಿಸುತ್ತವೆ. **'ಸರ್ವಂ ಖಲ್ವಿದಂ ಬ್ರಹ್ಮ'** ಎಂಬುದು ಅದರ ವಾಣಿ. ಇಡೀ ವಿಶ್ವದ ಒಟ್ಟು ಮೊತ್ತ ಬ್ರಹ್ಮವಷ್ಟೇ. ಬ್ರಹ್ಮವು ಪ್ರಕೃತಿಯಲ್ಲ. ಬದಲಾಗಿ ಪ್ರಕೃತಿಯೇ ಪಂಚೇಂದ್ರಿಯಗಳಿಂದ ಗ್ರಹಿಸಲ್ಪಟ್ಟ ಬ್ರಹ್ಮ. ಆಧುನಿಕ ಭೌತಶಾಸ್ತ್ರವು ಈಚಿನ ದಿನಗಳಲ್ಲಿ ಅಂತಿಮಸತ್ಯದ ಸ್ವರೂಪ ಸೂಕ್ಷ್ಮವೆಂದು ಸಾಬೀತುಪಡಿಸಲು ಪ್ರಯತ್ನಿಸುತ್ತಿದೆ. ಅದರ ಪ್ರಕಾರ ಸ್ಥೂಲವಾಗಿರುವುದು ತೋರಿಕೆಯಷ್ಟೇ. ನಮ್ಮ ಇಂದ್ರಿಯಗಳಿಗೆ ಗೋಚರವಾಗುತ್ತಿರುವುದು ಬೇರೆ, ವಾಸ್ತವತೆಯು ಬೇರೆ ಎಂಬುದನ್ನು ಈಚಿನ ದಿನಗಳಲ್ಲಿ ಆಧುನಿಕ ಭೌತಶಾಸ್ತ್ರವು ಸಾಬೀತುಪಡಿಸಲು ಪ್ರಯತ್ನಿಸುತ್ತದೆ. ಈ ಅಂಶವನ್ನು ಅದ್ವೈತ ವೇದಾಂತವು ಎಂದೋ ಸಾರಿತೆಂದು ವಿವೇಕಾನಂದರು ಹೇಳುತ್ತಾರೆ. ಅದ್ವೈತದ ಪ್ರಕಾರ ಸ್ಥೂಲವು ಸೂಕ್ಷ್ಮದ ಒಂದು ತೋರಿಕೆಯಷ್ಟೇ. ಈ ದೃಶ್ಯಜಗತ್ತು ಬ್ರಹ್ಮದ ಒಂದು ತೋರಿಕೆಯ ಅಭಿವ್ಯಕ್ತಿಯಷ್ಟೇ. ಅದ್ವೈತದ ಈ ಸಿದ್ಧಾಂತಕ್ಕೆ **ಬ್ರಹ್ಮವಿವರ್ತವಾದ**ವೆಂದು ಹೆಸರು. ವಿವೇಕಾನಂದರ ಪ್ರಕಾರ ಆಧುನಿಕ ವಿಚಾರದ ಅಥವಾ ವಿಜ್ಞಾನದ ಪರೀಕ್ಷೆಯನ್ನು ಎದುರಿಸಿ ನಿಲ್ಲಬಹುದಾದ **ಧರ್ಮವೇನಾದರೂ** ಇದ್ದರೆ, ಅದು ಅದ್ವೈತವು ಮಾತ್ರ. ಅದ್ವೈತವೇ ನಿಜವಾದ ಧರ್ಮ.

**ಪರಾಮರ್ಶನ ಗ್ರಂಥಗಳು**


- Irwing M. Copi, An Introduction to Logic, ಪು.118
- ಅದೇ ಪು.126
- M.Hiriyanna, Outlines of Indian Philosophy, Allen and Unwin, London, ಪು.54
- ದ್ವಿತೀಯಾದ್ವೈ ಭಯಂ ಭವತಿ –ಬೃ.ಉ–1–4–2; ಯದಾ ಹ್ಯೇವೈಷ ಏತಸ್ಮಿನ್ ಉದರಂ ಅಂತರಂ ಕುರುತೇ। ಅಥ ತಸ್ಯ ಭಯಂ ಭವತಿ।–ತೈ.ಉ. II–7.